ಕರೆಯಬೇಕೆಂದೇನೂ ಇಲ್ಲ. ಅವಳಿಗೆ ಅದು ಹೇಗೋ ವಿಷಯ ತಿಳಿಯುತ್ತದೆ. ಯಾರ ಮನೆಯಲ್ಲಿ ಯಾವಾಗ ಯಾವ ಕಾರ್ಯಕ್ರಮವಿದೆಯೆಂಬುದು ಗಂಗೆಯನ್ನು ಕೇಳಿದರೆ ತಿಳಿಯುವಷ್ಟು ಸುದ್ದಿ ಮಾಧ್ಯಮದ ಕೆಲಸವನ್ನು ಅವಳು ಇಂದಿಗೂ ಮುಂದುವರಿಸಿಕೊಂಡೇ ಬಂದವಳು. ಸುತ್ತಮುತ್ತ ಹತ್ತಾರು ಹಳ್ಳಿಗಳಲ್ಲಿ ಪ್ರತಿಯೊಂದು ಮನೆಯಲ್ಲಿಯೂ ಚಿಕ್ಕ ಮಕ್ಕಳಿಂದ ಹಿಡಿದು ಎರಡು ಮೂರು ತಲೆಮಾರಿನ ಹಿಂದಿನ ಎಲ್ಲರ ಹೆಸರೂ ಅವಳಿಗೆ ಬಾಯಿಯಲ್ಲಿದೆ. ಈಗಿನ ತರುವಾಯದ ಅನೇಕರು ಕಾಶೀಯಾತ್ರೆ ಮಾಡುವಾಗ ಹಿರಿಯರಿಗೆ ತರ್ಪಣ ಬಿಡುವ ಬಗ್ಗೆ ಅವರ ತಾತ ಮುತ್ತಾತರ ಹೆಸರುಗಳನ್ನು ಗಂಗೆಯ ಹತ್ತಿರ ಕೇಳಿ ತಿಳಿದುಕೊಳ್ಳುವುದೂ ಸಹ ಉಂಟು. ಅಷ್ಟರಮಟ್ಟಿಗೆ ಗಂಗೆ ಈ ಭಾಗದ ಜನತೆಗೆ ಮಾಹಿತಿದಾರಳಾಗಿದ್ದಾಳೆ. ಕೆಲವು ಮಕ್ಕಳು ತಮಾಷೆಗಾಗಿ ಅವಳನ್ನು ಗಂಗಾ ಸುದ್ದಿವಾಹಿನಿ ಎಂದೋ ಗಂಗಾ ಟಿ.ವಿ. ಎಂದೋ ಕರೆಯುವುದನ್ನು ಕೇಳಿದ್ದುಂಟು. ಅವಳಿಗೆ ಮದುವೆಯೂ ಇಲ್ಲ, ಮನೆಯೂ ಇಲ್ಲ. ಊರೇ ಅವಳ ಮನೆ. ಯಾವ ಮನೆಯವರೂ ಅವಳನ್ನು ತುಚ್ಛವಾಗಿ ಕಂಡಿದ್ದಿಲ್ಲ. ಅವಳು ಯಾರ ಮನೆಗೇ ಹೋಗಲಿ, ಅವಳು ಇರುವಷ್ಟು ದಿನ ಮನೆಯ ಸದಸ್ಯರಂತೇ ಇರುತ್ತಾಳೆ. ಎಲ್ಲರ ಜೊತೆಯೂ ಶುದ್ಧ ಮನಸ್ಸಿನಿಂದ ಮಾತನಾಡುತ್ತಾಳೆ. ಅವಳು ಎಂದೂ ಸುಳ್ಳು ಹೇಳಿದವಳು ಅಲ್ಲ. ಅವಳಿಗೆ ಪುಣ್ಯಕೋಟಿ ಗೋವಿನ ಹಾಡಿನ ಒಂದು ಚರಣ ಬಹಳ ಇಷ್ಟ. ಬಹುಶಃ ತನಗೂ ಪುಣ್ಯಕೋಟಿಗೂ ಸಾಮ್ಯತೆಯನ್ನು ಕಲ್ಪಿಸಿಕೊಂಡಿರಲೂಬಹುದು. 'ಸತ್ಯವೇ ನನ್ನ ತಾಯಿ ತಂದೆ, ಸತ್ಯವೇ ನನ್ನ ಬಂಧು ಬಳಗ ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎನ್ನುವ ಚರಣವನ್ನು ಆಗಾಗ ಗುನುಗಿಸುತ್ತಿರುತ್ತಾಳೆ. ಶಾಲೆಗೆ ಹೋಗದ ಗಂಗೆ ಆ ಹಾಡನ್ನು ಯಾರಿಂದ ಕಲಿತಳೋ ಹೇಗೆ ಕಲಿತಳೋ ತಿಳಿಯದು. ಏನೇ ಆದರೂ ಅವಳು ತನ್ನ ಇತಿಮಿತಿಯನ್ನು ಎಂದೂ ಮೀರಿದವಳಲ್ಲ. ಹೀಗಾಗಿ ಗಂಗೆ ಮನೆಗೆ ಬಂದರೆ ಯಾರೂ ಬೇಸರಿಸುವುದಿಲ್ಲ.

ಗಂಗೆ ಯಾರೊಡನೆಯೂ ಏನನ್ನೂ ಬೇಡಿದ್ದೇ ಇಲ್ಲ. ಯಾವುದೇ ಆಶೆಯಿಲ್ಲದ ನಿಸ್ಪ್ರಹ ಜೀವಿ ಅವಳು. ಅವಳಿಗೆ ಜ್ವರ ಶೀತ ಅಥವಾ ಇನ್ನಿತರ ಯಾವುದೇ ಕಾಯಿಲೆ ಬಂದಿದ್ದನ್ನು ನೋಡಿದವರು ಯಾರೂ ಇಲ್ಲವೆನ್ನಬಹುದು. ಅಷ್ಟೊಂದು ಆರೋಗ್ಯವಂತಳು ಅವಳು. ಅವಳಿಗೆ ಹಲವಾರು ವನಸ್ಪತಿ ಬೇರು ತೊಗಟೆ ಔಷಧಿಗಳು ಗೊತ್ತು. ಅದರಲ್ಲೂ ಹೆಂಗಸರ ಹಾಗೂ ಮಕ್ಕಳ ಹಲವು ತೊಂದರೆಗಳಿಗೆ ಗಂಗೆಯ ಔಷಧಿ ತುಂಬಾ ಪರಿಣಾಮಕಾರಿಯಾಗಿತ್ತು. ಯಾವಾಗಲೂ ಅವಳ ಕೈಚೀಲದಲ್ಲಿ ಹಲವು ತರಹದ ಬೇರು ತೊಗಟೆಗಳು ಇದ್ದೇ ಇರುತ್ತಿತ್ತು. ವನಸ್ಪತಿ ಔಷಧಿಗಳ ಬಗ್ಗೆ ಯಾರು ತಿಳಿಸಿಕೊಟ್ಟರೆಂದು ಅವಳನ್ನು ಕೇಳಿದರೆ, ಅವಳು ಹೇಳುವುದನ್ನು ನಂಬಬೇಕೋ ಬಿಡಬೇಕೋ ತಿಳಿಯುತ್ತಿರಲಿಲ್ಲ. ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಯರನ್ನು ಕಳೆದುಕೊಂಡು ಅನಾಥಳಾದ ಗಂಗೆ, ಮರ ಗಿಡ ಬಳ್ಳಿಗಳನ್ನು ತನ್ನ ತಂದೆ ತಾಯಿಯರಂತೇ ತಿಳಿದುಕೊಂಡಿದ್ದಳಂತೆ. ಒಂದು ಊರಿನಿಂದ ಇನ್ನೊಂದೂರಿಗೆ ಹೋಗಬೇಕಾದರೆ ಮಲೆನಾಡಾದ್ದರಿಂದ ಬೆಟ್ಟ ಗುಡ್ಡಗಳನ್ನು ಹಾದು ಹೋಗಬೇಕಾಗಿತ್ತು. ದಾರಿಯಲ್ಲಿ ಸಿಗುವ ಮರ ಬಳ್ಳಿಗಳನ್ನೆಲ್ಲಾ ಅವುಗಳ ಮೈದಡವುವ ರೀತಿಯಲ್ಲಿ ಪ್ರೀತಿಯಿಂದ ಮುಟ್ಟಿ ಅವುಗಳೊಡನೆ ಮಾತನಾಡುವ ಹವ್ಯಾಸ ಬೆಳೆಸಿಕೊಂಡಿದ್ದಳಂತೆ. ಅದೇನು ವಿಚಿತ್ರವೋ ರಾತ್ರಿ ನಿದ್ದೆಯಲ್ಲಿ ಅವುಗಳದೇ ಕನಸು ಬೀಳುತ್ತಿತ್ತಂತೆ. ಕನಸಿನಲ್ಲಿ ಅವುಗಳ ಉಪಯೋಗದ ಬಗ್ಗೆ ಯಾರೋ ಹೇಳಿದ ಅನುಭವವಾಗುತ್ತಿತ್ತಂತೆ. ಅದನ್ನೇ ಅವಳು ಅವಶ್ಯಕತೆ ಬಿದ್ದಾಗೆಲ್ಲಾ ತನಗೂ ಉಪಯೋಗಿಸಿಕೊಳ್ಳುತ್ತಾ, ಬೇರೆಯವರಿಗೂ ಕೊಡುವುದನ್ನು ರೂಢಿ ಮಾಡಿಕೊಂಡಿದ್ದಳು. ವಿಚಿತ್ರವೆಂದರೆ ಅವಳ ಔಷಧಿಗಳು ತುಂಬಾ ಪರಿಣಾಮಕಾರಿಯಾಗಿದ್ದದ್ದು. ಬಹುಶಃ ಈ ಔಷಧಿಗಳಿಂದಾಗಿಯೇ ಅವಳಿಗೆ ಎಲ್ಲೇ ಹೋದರೂ ಯಾರೂ ಅಸಡ್ಡೆಯಿಂದ ಕಾಣುತ್ತಿರಲಿಲ್ಲವೇನೋ. ಸಮೀಪದ ಹತ್ತಾರು ಹಳ್ಳಿಗಳ ಎಷ್ಟೋ ಮನೆಗಳವರು, ಔಷಧಿಗಳಿಗಾಗಿ ಗಂಗೆಯನ್ನೇ ಅವಲಂಬಿಸಿರುವುದೂ ಇತ್ತು. ಗಂಗೆ ಮಾತ್ರ ಯಾವುದೇ ಔಷಧಿಗೂ ದುಡ್ಡು ಕಾಸು ಪಡೆದದ್ದಿಲ್ಲ. ಅವಳಿಗೆ ಅದರ ಆಸೆಯೂ ಇರಲಿಲ್ಲ.

ಈ ಗಂಗೆಗೆ ಕಾಶಿಗೆ ಹೋಗುವ ಬಯಕೆಯಾದದ್ದೂ ಸಹ ವಿಚಿತ್ರ ಸನ್ನಿವೇಶದಲ್ಲಿ. ಈಗ ಸುಮಾರು 1012 ವರ್ಷಗಳ ಹಿಂದೆ ಹೈಸ್ಕೂಲ್ ಶಿಕ್ಷಕರೊಬ್ಬರು ತಮ್ಮ ತಾಯಿಯ ಆರೋಗ್ಯ ಸಂಬಂಧದಲ್ಲಿ ಗೋಕರ್ಣದಲ್ಲಿ ಅದ್ಯಾವುದೂ ಪೂಜೆ ಇಟ್ಟುಕೊಂಡಿದ್ದರಂತೆ. ಪೂಜೆಗೆ ಎಲ್ಲ ವ್ಯವಸ್ಥೆಯಾಗಿತ್ತು. ಪೂಜೆಯ ದಿನ ಬೆಳಗ್ಗೆಯೇ ಬೇಗ ಹೊರಟು ಬಂದರೆ ಸಾಕು ಎಂದು ಪೂಜಾರಿಗಳು ತಿಳಿಸಿದ್ದರಾದ್ದರಿಂದ, ಶಿಕ್ಷಕರು ತನ್ನ ತಾಯಿ ಹಾಗೂ ಹೆಂಡತಿಯನ್ನು ಕರೆದುಕೊಂಡು ಗೋಕರ್ಣಕ್ಕೆ ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಅವರ ತಾಯಿಯ ಆರೋಗ್ಯ ಒಮ್ಮೆಲೇ ಬಿಗಡಾಯಿಸಿತ್ತು. ಪೂಜಾರಿಗಳಿಗೆ ಫೋನ್ ಮಾಡಿ ತಿಳಿಸಲಾಗಿ, ಪೂಜೆಗೆ ಎಲ್ಲ ತಯಾರಿಯಾಗಿದ್ದರಿಂದ ಹಾಗೂ ತಾಯಿಯ ಆರೋಗ್ಯ ಕೋರಿ ಮಾಡುವ ಪೂಜೆಯಾದ್ದರಿಂದ ಪೂಜೆಯನ್ನು ಮುಂದೂಡುವುದೂ ಸರಿಯಲ್ಲವೆಂದೂ, ಒಂದೊಮ್ಮೆ ಶಿಕ್ಷಕರಿಗೆ ಬರಲಾಗದಿದ್ದರೆ ಅವರ ಧರ್ಮ ಪತ್ನಿ ಬಂದರೂ ಸಾಕೆಂದು ಪೂಜಾರಿಗಳು ತಿಳಿಸಿದರಂತೆ. ಆ ಸಮಯಕ್ಕೆ ಸರಿಯಾಗಿ ಗಂಗೆ ಅವರ ಮನೆಗೆ ಬಂದಳಂತೆ. ಹೀಗಾಗಿ ಜೊತೆಗೆ ಇರಲಿ ಎಂದು ಶಿಕ್ಷಕರ ಹೆಂಡತಿ ಗಂಗೆಯನ್ನು ಕರೆದುಕೊಂಡು ಗೋಕರ್ಣಕ್ಕೆ ಹೋಗಿದ್ದರಂತೆ. ಪೂಜೆಯನ್ನು ಮುಗಿಸಿ ಬಸ್ಸಿನಲ್ಲಿ ಕುಳಿತು ಬರುತ್ತಿದ್ದಾಗ ಗಂಗೆಗೆ ತೂಕಡಿಕೆಯುಂಟಾಗಿ ಅರೆ ನಿದ್ದೆ ಬಂದಂತಾಗಿತ್ತು. ಅರೆ ನಿದ್ದೆಯ ಜೊಂಪಿನಲ್ಲಿರುವಾಗ ಏನೋ ಒಂದು ಧ್ವನಿ ಅವಳ ಕಿವಿಯೊಳಗೆ 'ಗೋಕರ್ಣದಲ್ಲಿ ಒಂದೇ ಅಲ್ಲ.. ನಾನು ಕಾಶೀಲೂ ಇದ್ದೀನಿ..ಬಾ' ಎಂದು ಹೇಳಿದಂತಾಯಿತಂತೆ. ಆ ಕ್ಷಣದಲ್ಲಿ ಬೆಚ್ಚಿಬಿದ್ದಂತಾಗಿದ್ದ ಗಂಗೆಗೆ ನಿದ್ದೆ ಹಾರಿಹೋಗಿತ್ತು. ಕಾಶಿಯ ಬಯಕೆ ಆಗಲೇ ಮೊಳಕೆಯೊಡೆದಿತ್ತು. ಕಾಶೀ ವಿಶ್ವನಾಥನೇ ತನ್ನನ್ನು ಕರೆದಿದ್ದಾನೆ ಎಂದುಕೊಂಡ ಗಂಗೆ, ಅಂದಿನಿಂದ ಯಾರ ಮನೆಗೆ ಹೋದರೂ ಈ ಎಲ್ಲ ಕಥೆಯನ್ನು ಹೇಳುವುದು, ಕಾಶೀಯಾತ್ರೆಗಾಗಿ ಏನಾದರೂ ಹಣ ಸಹಾಯ ಮಾಡಲು ಬೇಡುವುದು ಪ್ರಾರಂಭವಾಗಿತ್ತು. ಎಂದೂ ಯಾರೊಂದಿಗೂ ದುಡ್ಡು ಕೇಳದ ಗಂಗೆಗೆ ಕಾಶೀ ಯಾತ್ರೆಗಾಗಿ ದುಡ್ಡು ಕೂಡಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಅವಳಿಗೆ ಇಲ್ಲವೆನ್ನಲಾಗದ ಕೆಲವರು ಹತ್ತು, ಇಪ್ಪತ್ತು ರೂಪಾಯಿಗಳನ್ನು ನೀಡಿ ಸಾಗಹಾಕುತ್ತಲಿದ್ದರು. ಇನ್ನು ಕೆಲವರು ನೋಡೋಣ ಎಂಬ ಉತ್ತರದಲ್ಲಿಯೇ ಕಳಚಿಕೊಳ್ಳುತ್ತಿದ್ದರು.

ಪ್ರತಿ ವರ್ಷವೂ ಸೆಪ್ಟಂಬರ್ ಅಕ್ಟೋಬರ್ ಅವಧಿಯಲ್ಲಿ ಬರುವ ಪಿತೃ ಪಕ್ಷದ ಸಮಯದಲ್ಲಿ, ಅಗಲಿದ ಹಿರಿಯರ ಆತ್ಮಗಳಿಗೆ ಪಿಂಡಶ್ರಾದ್ಧ/ತರ್ಪಣ ನೀಡುವ ಬಯಕೆಯಿಂದ ಕಾಶೀಯಾತ್ರೆ ಮಾಡುವುದು ಹಲವಾರು ಕಡೆಗಳಲ್ಲಿ ಮೊದಲಿನಿಂದಲೂ ನಡೆದು ಬಂದಿದೆ. ಈ ರೀತಿ ಕಾಶೀಯಾತ್ರೆ ಮಾಡುವವರನ್ನು ಕರೆದುಕೊಂಡು ಹೋಗಿ ಬರುವ ಕಾಯಕವನ್ನು ಬಹಳ ಹಿಂದಿನಿಂದಲೂ ಗೋಕರ್ಣದ ಕೆಲವು ವೈದಿಕರು ನಡೆಸಿಕೊಂಡು ಬರುತ್ತಿದ್ದಾರೆ. ಇತ್ತೀಚೆಗೆ ಕೆಲವರು ಬೇರೆ ಬೇರೆ ಟ್ರಾವೆಲ್ ಏಜೆನ್ಸಿಗಳ ಮೂಲಕವೂ ಹೋಗಿ ಬರುತ್ತಿದ್ದಾರೆ. ಆದರೆ ಕಾಶಿ, ಪ್ರಯಾಗ ಹಾಗೂ ಗಯಾ ಮುಂತಾದ ತೀರ್ಥಕ್ಷೇತ್ರಗಳಲ್ಲಿಗಳಲ್ಲಿ ತರ್ಪಣ ಶ್ರಾದ್ಧ ಮಾಡಬಯಸುವ ಅನೇಕರು ಇಂದಿಗೂ ಗೋಕರ್ಣದ ಭಟ್ಟರನ್ನೇ ಹೆಚ್ಚಾಗಿ ಆಶ್ರಯಿಸುತ್ತಿದ್ದಾರೆ. ಯಾಕೆಂದರೆ ಸ್ವತಃ ವೈದಿಕರಾದ ಭಟ್ಟರು ಕಾಶೀಯಾತ್ರೆ ಮಾಡಿಸುವದರೊಂದಿಗೆ ಶಾಸ್ತ್ರೋಕ್ತ ವೈದಿಕ ಕರ್ಮಾಂಗಗಳನ್ನೂ ನೆರವೇರಿಸಿಕೊಡುತ್ತಾರೆ. ಇದರಿಂದಾಗಿ ಉತ್ತರ ಭಾರತದ ತೀರ್ಥಕ್ಷೇತ್ರಗಳಲ್ಲಿ ದಕ್ಷಿಣದ ಪದ್ಧತಿಯಂತೆ ಶ್ರಾದ್ಧ ಕರ್ಮಗಳನ್ನು ಮಾಡಿಸುವ ವೈದಿಕರನ್ನು ಹುಡುಕುವ ಕಷ್ಟವಿರುವುದಿಲ್ಲ.

ಕಾಶೀಯಾತ್ರೆಯ ಬಯಕೆ ಶುರುವಾದಂದಿನಿಂದ ಯಾತ್ರೆಯ ಖರ್ಚಿಗೆಂದು ಹೋದಲ್ಲೆಲ್ಲಾ ಬೇಡಿ ದುಡ್ಡು ಕೂಡಿಡುತ್ತಿದ್ದರೂ, ಭಟ್ಟರು ನಿಗದಿಪಡಿಸಿದಷ್ಟು ಯಾತ್ರಾ ಖರ್ಚಿನ ಹಣವನ್ನು ಗಂಗೆಯಿಂದ ಒಟ್ಟು ಮಾಡಲಾಗಿರಲಿಲ್ಲ. ಸುತ್ತುಮುತ್ತಲಿನ ಊರುಗಳಲ್ಲಿ ಯಾರೇ ಕಾಶಿಗೆ ಹೊರಡುವ ತಯಾರಿಯಲ್ಲಿರಲಿ ಗಂಗೆಗಂತೂ ವಿಷಯ ತಿಳಿಯುತ್ತಲಿತ್ತು. ಜೊತೆಗೆ ಅವಳ ಕಾಶೀಯಾತ್ರೆಯ ಆಸೆಯೂ ಚಿಗುರುತ್ತಲಿತ್ತು. ಆದರೆ ಅದಾಗಲೇ ಗಂಗೆಯ ವಯಸ್ಸು 75 ವರ್ಷದ ಮೇಲ್ಪಟ್ಟಿದ್ದರಿಂದ ಒಂಟಿ ಜೀವಿಯಾದ ಅವಳನ್ನು ಆ ವಯಸ್ಸಿನಲ್ಲಿ ಕಾಶಿಗೆ ಕರೆದುಕೊಂಡು ಹೋಗಲು ಯಾರೂ ತಯಾರಿರಲಿಲ್ಲ. ಎಲ್ಲರೂ ಏನೇನೋ ನೆಪ ಹೇಳಿ ತಪ್ಪಿಸಿಕೊಳ್ಳುತ್ತಿದ್ದರು. ಕಳೆದ ಹತ್ತು ವರ್ಷಗಳಿಂದ ಇದು ಹೀಗೇ ಸಾಗಿತ್ತು. ಗಂಗೆಯ ಕಾಶೀಯಾತ್ರೆಯ ಕನಸು ಜನರ ಬಾಯಿಗಳಲ್ಲಿ ಅಪಹಾಸ್ಯಕ್ಕೆ ಮಾತ್ರ ಸೀಮಿತಗೊಂಡು ಆಡಿಕೊಳ್ಳುವ ಮಾತಾಗಿಹೋಗಿತ್ತು. ಆದರೆ ಗಂಗೆಯು ಮಾತ್ರ ಹೋದಲ್ಲಿ ಬಂದಲ್ಲಿ ಸಿಕ್ಕ ಎಲ್ಲರೊಡನೆಯೂ ಹಣ ಸಹಾಯ ಕೇಳುತ್ತಾ ತನ್ನ ಕನಸನ್ನು ಇನ್ನೂ ಜೀವಂತವಾಗಿರಿಸಿಕೊಂಡಿದ್ದಳು.